ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು. ದಿನಾಂಕಃ 25-05-2017.
ಪಾಟೀ ಸವಾಲುಃ ಆರೋಪಿ ಪರ ಶ್ರೀ ಮಹಮ್ಮದರಫಿ ವಕೀಲರಿಂದ ;-

(2ನೇ ಆರೋಪಿತರು ಗೈರ ಹಾಜರಾಗಿದ್ದು ಆತನ ಗುರುತಿಸುವಿಕೆಯಲ್ಲಿ ಯಾವುದೇ ತಕ್ರಾರು ಇರುವುದಿಲ್ಲವೆಂದು ಆರೋಪಿ ಪರ ವಕೀಲರು ಪ್ರಾರ್ಥಿಸಿದ್ದರಿಂದ ವಿನಾಯತಿ ಅರ್ಜಿಯನ್ನು ಪುರಸ್ಕರಿಸಲಾಯಿತು)

ನಾನು 1990 ರಿಂದ ಸ್ನೇಹಕುಂಜ ಸಂಸ್ಥೆಯಲ್ಲಿ ಸಮಾಜ ಸೇವಕಿ ಎಂದು ಕೆಲಸ ಮಾಡುತ್ತಾ ಇದ್ದೇನೆ. ನಾನು ಕೆಲಸಕ್ಕೆ ಯಾವುದೇ ಹಣ ಕೊಟ್ಟು ಸೇರಿಕೊಂಡಿರುವುದಿಲ್ಲ. ಸರಕಾರಿ ಅಥವಾ ಅರೇ ಸರಕಾರಿ ನೌಕರಿಗಳಲ್ಲಿ ಹಣ ಕೊಟ್ಟು ನೌಕರಿಗೆ ಸೇರಿಕೊಳ್ಳುವುದಿಲ್ಲ ಎಂದರೆ ಸರಿ. ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನೌಕರಿಗಾಗಿ ಹಿಂದೆ ಪ್ರಯತ್ನಿಸಿದ್ದೇನೆಂದರೆ ಸರಿ. ನಾನು ನೌಕರಿಗಾಗಿ ಯಾರಿಗೂ ಹಣ ಕೊಟ್ಟಿರುವುದಿಲ್ಲ. ನಾನು ಫಿರ್ಯಾದಿಯಲ್ಲಿ ಏನು ಬರೆದಿದ್ದೇನೆ ಎನ್ನುವದು ನನಗೆ ಗೊತ್ತಿಲ್ಲ ಎನ್ನುವದು ಸರಿಯಲ್ಲ. ನಾನು ದೂರನ್ನು ಮೌಖಿಕವಾಗಿ ಹೇಳಿ ಬರೆಸಿದ್ದೇನೆ. ನಾನು ಈ ದೂರನ್ನು ದಾಖಲಿಸುವ ಮುಂಚೆ ಯಾರಿಗೂ ಭೇಟಿ ಆಗಿರುವುದಿಲ್ಲ. ದಿಃ25-12-2011 ರಂದು ದೂರನ್ನು ಸಲ್ಲಿಸಿದ್ದೇನೆ. ನಾನು 1ನೇ ಆರೋಪಿತಳು ಎನ್‌ಟಿಸಿ ಕಾಲೇಜನ್ನು ನಡೆಸುತ್ತಿದ್ದು ಸದ್ರಿ ಕಾಲೇಜಿಗೆ ನಾನು ಅತಿಥಿಯಾಗಿ ಕಾರ್ಯಕ್ರಮಕ್ಕೆ ಹೋಗಿದ್ದೇನು. ಆ ಬಗ್ಗೆ ನಾನು ವೈಯಕ್ತಿಕವಾಗಿ ದಾಖಲೆಯನ್ನು ಇಟ್ಟುಕೊಂಡಿಲ್ಲ. ಕಾರ್ಯಕ್ರಮವನ್ನು ಏರ್ಪಡಿಸಿದವರು ದಾಖಲೆಯನ್ನು ಇಟ್ಟುಕೊಂಡಿರುತ್ತಾರೆಂದು ಪೊಲೀಸರಿಗೆ ಮಾಹಿತಿ ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. 1ನೇ ಆರೋಪಿತಳು ಫೋನ ಮೂಲಕ ನನಗೆ ಪದೇ ಪದೇ ಸಂಪರ್ಕ ಮಾಡಿದ್ದಾಳೆಂದು ದೂರಿನಲ್ಲಿ ಹೇಳಿ ಬರೆಸಿದ್ದೇನೆ. 1 ಮತ್ತು 2ನೇ ಆರೋಪಿತರು ಸಂಗನಮತ ಮಾಡಿಕೊಂಡ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನಮ್ಮ ಮನೆ ನಾಗದೇವಿ ರಸ್ತೆಯಿಂದ ಮೀನುಮಾರುಕಟ್ಟೆಯ ಹತ್ತಿರದಲ್ಲಿದೆ. ನಡೆದುಕೊಂಡರೆ 5-6 ನಿಮೀಷದೊಳಗೆ ಹೋಗಿ ಮುಟ್ಟಬಹುದು. ನಮ್ಮ ಮನೆಯಿಂದ ಮೂರುಕಟ್ಟೆಗೆ ಹೋಗಬೇಕಾದರೆ 2-3 ನಿಮೀಷ ಬೇಕಾಗುತ್ತದೆ. ಚಾ.ಸಾ-11 ನನ್ನ ಭಾವನ ಮಗಳು. ಆಕೆಯ ನೌಕರ ವಿಚಾರವಾಗಿ ಹಣ ಕೊಡುವಾಗ ಆಕೆ ನಮ್ಮ ಮನೆಯಲ್ಲಿಯೇ ಇದ್ದಳು. ದಿಃ9-1-2009 ರಂದು ಚೆಕ್ಕನ್ನು ಕೊಟ್ಟಿದ್ದೇನೆ. ನನ್ನ ಖಾತೆಯ ಸಿಂಡಿಕೇಟ ಬ್ಯಾಂಕಿನ ಚೆಕ್ಕನ್ನು ಕೊಟ್ಟದ್ದೆನೆ. ಈಗ ನನ್ನ ಖಾತೆ ನಂಬರ ಗೊತ್ತಿರುವುದಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ. ಅದರ ಕೊನೆಯ ಸಂಖ್ಯೆ 936 ಎಂದು. ಚೆಕ್ಕಿನ ಮೇಲೆ ದಿಃ9-1-2009 ಎಂದು ನಮೂದ ಮಾಡಿದ್ದೇನೆ. ನಾನು 1ನೇ ಆರೋಪಿಯ ಹೆಸರನ್ನು ಬರೆದು ಚೆಕ್ಕನ್ನು ನೀಡಿದ್ದೇನೆ. ಸದ್ರಿ ಚೆಕ್ಕಿನ ಮೇಲೆ ಬೇರೆ ಯಾವುದೇ ಗುರುತನ್ನು ಮಾಡಿರುವುದಿಲ್ಲ. ಚಾ.ಸಾ-11 ರವರು 1ನೇ ಆರೋಪಿತಳಿಗೆ ಹಣ

ಕೊಟ್ಟ ಬಗ್ಗೆ ನನಗೆ ವ್ಯಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಚೆಕ್ಕ ನೀಡಿದ 6 ತಿಂಗಳ ನಂತರ ಚಾ.ಸಾ-11 ರವರ ತಾಯಿ ಆರೋಪಿಗೆ ಹಣ ಕೊಟ್ಟ ಬಗ್ಗೆ ತಿಳಿಸಿದ್ದಾಳೆ. ಚಾ.ಸಾ-10 ರವರ ಎಫ್‌ಡಿಎ ಪರೀಕ್ಷೆಯ ಹಾಲಟಿಕೇಟನ್ನು ಆರೋಪಿಯೇ ಪಡೆದುಕೊಂಡಿದ್ದಾಳೆ. ಎಫ್‌ಡಿಎ ಪರೀಕ್ಷೆಗಾಗಿ ಯಾವ ವರ್ಷ, ಯಾವ ದಿನಾಂಕದಂದು ಅರ್ಜಿ ಕರೆದಿದ್ದರೆಂದು ಈಗ ನನಗೆ ನೆನಪಿಲ್ಲ. ಚಾ.ಸಾ-11 ರವರನ್ನು ಎಫ್‌ಡಿಎ ಪರೀಕ್ಷೆಗೆ 1ನೇ ಆರೋಪಿಯೇ ಕುಳಿತುಕೊಳ್ಳಲು ಹೇಳಿದ್ದಳು. ಚಾ.ಸಾ-9 ರವರು 1ನೇ ಆರೋಪಿತಳಿಗೆ ಎಲ್ಲಿ ಮತ್ತು ಯಾವಾಗ ಚೆಕ್ಕ ಕೊಟ್ಟಿದ್ದಾರೆನ್ನುವದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದ್ರಿ ಚೆಕ್ಕನ ಮೇಲೆ ಆತನೇ ಬರೆದು ಸಹಿ ಮಾಡಿದ್ದಾನೆ. ಬ್ಯಾಂಕಿನಲ್ಲಿ ನನ್ನ ಮುಂದೆ ಚೆಕ್ಕನ್ನು ಬರೆದುಕೊಟ್ಟಿದ್ದಾನೆ. ಚಾ.ಸಾ-9 ರವರು ಚೆಕ್ಕನ್ನು ನನ್ನ ಹತ್ತಿರ ಕೊಟ್ಟಿದ್ದರು ಅದನ್ನು ನಾನು 1ನೇ ಆರೋಪಿತಳಿಗೆ ಕೊಟ್ಟಿದ್ದೇನು. ಚಾ.ಸಾ-9 ರವರ ತಂಗಿ 1ನೇ ಆರೋಪಿತಳಿಗೆ ಹಣ ಕೊಟ್ಟಿಲ್ಲ ಆದರೆ ಚೆಕ್ಕನ್ನು ನನ್ನ ತಮ್ಮ ಹಾಗೂ ತಂಗಿ ಸೇರಿ ಕೊಟ್ಟಿದ್ದಾರೆ. ನಮ್ಮ ತಾಯಿಯ ಬಳೆಗಳನ್ನು ನನ್ನ ತಂದೆ ಸಿಂಡಿಕೇಟ ಬ್ಯಾಂಕಿನಲ್ಲಿ ಅಡ ಇಟ್ಟು ಹಣ ತಂದಿದ್ದಾರೆ. ಆ ಬಗ್ಗೆ ಪಾಸಪುಸ್ತಕದಲ್ಲಿ ನಮೂದ ಇದೆ. ಯಾವ ದಿನಾಂಕ ಎಂದು ಈಗ ನೆನಪಿರುವುದಿಲ್ಲ. ಸಿಂಡಿಕೇಟ ಬ್ಯಾಂಕಿನಲ್ಲಿ ಬಳೆಗಳನ್ನು ಅಡ ಇಟ್ಟು ಹಣ ಕೊಟ್ಟ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ಕೊಟ್ಟಿಲ್ಲ ಆದರೆ ಎಂಟ್ರಿಯನ್ನು ತೋರಿಸಿದ್ದೇವೆ. ನಾನು ಚೆಕ್ಕನ್ನು ಕೊಡುವ ಮೊದಲು 1ನೇ ಆರೋಪಿತಳು ಒಂದು ವರ್ಷದಿಂದ ಪರಿಚಯ ಇದ್ದಾಳೆ. ಅದಕ್ಕಿಂತ ಮುಂಚೆ 1ನೇ ಆರೋಪಿತಳು ಐದು ಸಾವಿರ ಪಡೆದು ಹಂತ ಹಂತವಾಗಿ ಹಣ ಮುಟ್ಟಿಸಿದ್ದಾಳೆ. 2 ಸಲ ಆರೋಪಿತಳು ನನ್ನಿಂದ ಹಣ ಪಡೆದು ಮರಳಿ ಕೊಟ್ಟಿದ್ದಾಳೆ. ನಾನು ಕೊಟ್ಟ ಐದು ಸಾವಿರಗಳಲ್ಲಿ ಒಂದು ಸಾವಿರದಂತೆ ಮೂರು ಬಾರಿ ಹಾಗೂ ಎರಡು ಸಾವಿರ ಒಂದು ಬಾರಿ ಕೊಟ್ಟಿದ್ದಾಳೆ. ನಂತರ ತೆಗೆದುಕೊಂಡ ಎರಡು ಸಾವಿರ ಹಣವನ್ನು ಒಮ್ಮೆಲೆ ಕೊಟ್ಟಿದ್ದಾಳೆ. ಸದನಾಂದ ಎನ್ನುವವರು ನನ್ನ ಗಂಡನಾಗಬೇಕು. ಚಾ.ಸಾ-2 ಮತ್ತು 3 ರವರು ನನಗೆ ಪರಿಚಯಸ್ತರಾಗಿರುವುದಿಲ್ಲ. ಚಾ.ಸಾ-2 ಮತ್ತು 3 ರವರು ನನ್ನಲ್ಲಿ ತಮ್ಮ ಪರಿಚಯ ಮಾಡಿಕೊಂಡ ಬಗ್ಗೆ ನನಗೆ ನೆನಪಿಲ್ಲ. ಚಾ.ಸಾ-2 ಮತ್ತು 3 ರವರು ಎಲ್ಲಿ ವಾಸ್ತವ್ಯ ಮಾಡಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ನಮ್ಮ ಮನೆ ಮುಂದೆ ಪ್ರಭಾಕರ ರವರ ಮನೆ, ಪಕ್ಕದಲ್ಲಿ ಸುಲೇಮಾನ ಎನ್ನುವವರ ಮನೆ ಇದೆ. ನಮ್ಮ ಪಕ್ಕ-ಪಕ್ಕದ ಮನೆಯವರಿಗೆ ನಮ್ಮ ಮನೆಗೆ ಬಂದವರ ಬಗ್ಗೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪ್ರಭಾಕರ ರವರ ಮನೆಯವರಿಗೆ ಗೊತ್ತಾಗುತ್ತದೆ ಎನ್ನುತ್ತಾರೆ. ನನ್ನ ಕುಟುಂಬದ ವ್ಯವಹಾರಗಳನ್ನು ನನ್ನ ಗಂಡ ನೋಡಿಕೊಳ್ಳುತ್ತಾನೆ. ನನ್ನ ತಂಗಿಯ ವ್ಯವಹಾರ ಆಗಿದ್ದರಿಂದ ನಾನು ವಹಿಸಿಕೊಂಡಿದ್ದೇನೆ. ಈಗ ಸಾಕ್ಷಿಗೆ ಒಂದು ದಾಖಲೆ ತೋರಿಸಿ ಅದರಲ್ಲಿ ಕಂಡು ಬರುವ ಭಾವಚಿತ್ರ ನಾಗರತ್ನಾ ರವರದ್ದು ಎಂದು ಸೂಚಿಸಿದ್ದಕ್ಕೆ ಹೌದು ಎಂದು ತಿಳಿಸಿದ್ದರಿಂದ ಸದ್ರಿ ದಾಖಲೆ ಎಫ್‌ಡಿಎ ಪರೀಕ್ಷೆಯ ಪ್ರವೇಶಪತ್ರವಾಗಿದ್ದು

ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಎಫ್‌ಡಿಎ ಪರೀಕ್ಷೆಯ ಪಲಿತಾಂಶವನ್ನು ನಾವು ಎದರು ನೋಡುತ್ತಿದ್ದೆವು ಎಂದರೆ ಸಾಕ್ಷಿ 1ನೇ ಆರೋಪಿತಳಿಗೆ ಪ್ರವೇಶಪತ್ರವನ್ನು ಕೊಟ್ಟಿದ್ದೇವೆಂದು ಉತ್ತರಿಸಿದ್ದಾರೆ. ಚಾ.ಸಾ-10ರವರ ಜೊತೆಗೆ ಹೋದವರು ಯಾರು ಪರೀಕ್ಷೆಯಲ್ಲಿ ಪಾಸಾಗಿದ್ದಾರೆಂದು ನನಗೆ ಗೊತ್ತಿಲ್ಲ. 1ನೇ ಆರೋಪಿತಳು ನೀನು ಪಾಸಾಗಿದ್ದೀರಿ ಎಂದು ಹೇಳುತ್ತಿದ್ದಳು.

ಚೆಕ್ಕನ್ನು ಬೇರೆಯವರಿಗೆ ಕೊಟ್ಟಾಗಲು ನಗಧೀಕರಣವಾಗುತ್ತದೆನ್ನುವದು ನನಗೆ ಗೊತ್ತಿಲ್ಲ. 1ನೇ ಆರೋಪಿತಳು ಎನ್‌ಟಿಸಿ ಕಾಲೇಜ ನಡೆಸುತ್ತಿದ್ದಳೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಲ್ಲಿ ಜಾಗೃತಾ ಶಿಬಿರ ಹಮ್ಮಿಕೊಂಡಿದ್ದಾಗ ನಾನು ಅಲ್ಲಿಗೆ ಹೋಗಿದ್ದೆನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1ನೇ ಆರೋಪಿತಳು ನನಗೆ ಪರಿಚಯಸ್ತಳಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾ.ಸಾ-10 ರವರು ಎಫ್‌ಡಿಎ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದಳು ಮತ್ತು ಪರೀಕ್ಷೆಗೆ ಕುಳಿತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಕೆಗೆ ಯಾವುದೇ ಪ್ರವೇಶಪತ್ರ ಬಂದಿರುವುದಿಲ್ಲವೆಂದರೆ ಸರಿಯಲ್ಲ. 1ನೇ ಆರೋಪಿತಳಿಗೆ ಪ್ರವೇಶಪತ್ರ ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1ನೇ ಆರೋಪಿತಳಿಗೆ ವೈಯಕ್ತಿಕ ವ್ಯವಹಾರದ ಸಲುವಾಗಿ ಚೆಕ್ಕನ್ನು ಕೊಟ್ಟಿದ್ದೇನೆನ್ನುವದು ಸರಿಯಲ್ಲ. ನನ್ನ ತಂದೆ ಬಂಗಾರ ಅಡವಿಟ್ಟು ಹಣ ತಂದುಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2009 ನೇ ಸಾಲಿನಲ್ಲಿ ಎಫ್‌ಡಿಎ ಪರೀಕ್ಷೆಗೆ ಚಾ.ಸಾ-9 ರಿಂದ 11 ರವರು ಅರ್ಜಿ ಸಲ್ಲಿಸಿಲ್ಲ ಎನ್ನುವದು ಸರಿಯಲ್ಲ. 1ನೇ ಆರೋಪಿತಳು ಫೋನ ಕರೆ ಮಾಡುತ್ತಿದ್ದಳು ನಮ್ಮ ಮನೆಗೆ ಬಂದು ಹೋಗುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾ.ಸಾ-0 ರವರು 1ನೇ ಆರೋಪಿಳಿಗೆ ನೌಕರಿಗೆ ಚೆಕ್ಕನ್ನು ಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನಮಗೆ ಮೋಸ ಮಾಡುವ ಉದ್ದೇಶದಿಂದ ನಮ್ಮಿಂದ ಯಾವುದೇ ಹಣ ಮತ್ತು ಚೆಕ್ಕನ್ನು ಪಡೆದಿಲ್ಲ ಎನ್ನುವದು ಸರಿಯಲ್ಲ. ಆರೋಪಿತರು ನೌಕರಿ ಕೊಡಿಸುತ್ತೇವೆಂದು ಹಣ ಮತ್ತು ಚೆಕ್ಕನ್ನು ಪಡೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.ನಾನು ಆರೋಪಿತರ ಮೇಲಿರುವ ವೈಯಕ್ತಿಕ ದ್ವೇಷದಿಂದ ಸುಳ್ಳು ದೂರನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಪೊಲೀಸರು ನಮ್ಮ ಮನೆಯ ಹತ್ತಿರ ಬಂದು ಪಂಚನಾಮೆ ಮಾಡಿಕೊಂಡು ಹೋಗಿಲ್ಲ ಎನ್ನುವದು ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.